# ಇಪ್ಪತ್ತೈದನೇ ವರ್ಷಕ್ಕೆ...

ಮಾನವನ ಬೌದ್ಧಿಕ ವಿಕಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲು ಭಾಷೆಗಳ ಆವಿಷ್ಕಾರ. ಭಾವನೆ, ಅರಿವು, ಮಾಹಿತಿಗಳನ್ನು ಇತರರಿಗೆ ದಾಟಿಸುವಲ್ಲಿ ಭಾಷೆ ಅತಿ ಮಹತ್ವದ ಮಾಧ್ಯಮವಾಯಿತು. ಆಧ್ಯಾತ್ಮಿಕ ಕ್ಷೇತ್ರದಲ್ಲೂ ಅಷ್ಟೆ. ದಿವ್ಯ ಅನುಭೂತಿಯನ್ನು ಪಡೆದ ವ್ಯಕ್ತಿಯು ಇತರರಿಗೆ ಅದನ್ನು ತಿಳಿಸಲು, ಅತೀತದ-ಅನಿರ್ವಚನೀಯದ ಸೂಚನೆಯನ್ನು ಇತರರಿಗೆ ನೀಡಲು ಹಾಗೂ ಅಂಥ ದಿವ್ಯಾನುಭವವನ್ನು ಹೊಂದುವ ಮಾರ್ಗವನ್ನು ತಿಳಿಸಿಕೊಡಲು ಭಾಷೆಯ ಮಾಧ್ಯಮವನ್ನು ಅವಲಂಬಿಸಬೇಕಾಯಿತು. ಈ ಹಂತದಲ್ಲೇ ವೇದ, ಶಾಸ್ತ್ರಗಳು, ಮಹಾತ್ಮರ ವಾಣಿ-ಸಂದೇಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಗ್ರಂಥವು ಕೇವಲ ಅಕ್ಷರ-ಶಬ್ದ-ವಾಕ್ಯಗಳನ್ನು ಹೊಂದಿದ ವಸ್ತುವಾಗಿ ಉಳಿಯದೆ, ದಿವ್ಯತೆಯತ್ತ ಕರೆದೊಯ್ಯುವ ಒಂದು ಪವಿತ್ರ ಸಾಧನವಾಗಿ ಮಾರ್ಪಟ್ಟಿತು; ಅದು ಪೂಜ್ಯವೂ ಆದರಣೀಯವೂ ಆದ ವಸ್ತುವಾಗಿ ಪರಿಗಣಿಸಲ್ಪಟ್ಟಿತು.

### ದಿವ್ಯತ್ರಯರ ಜೀವನ-ಉಪದೇಶ

ಶ್ರೀರಾಮಕೃಷ್ಣರ ಆಗಮನದೊಂದಿಗೆ ಸತ್ಯಯುಗ ಆರಂಭವಾಯಿತು ಎಂಬ ಒಂದು ಮಾತಿದೆ. ಪ್ರಪಂಚದ ಹತ್ತುಹಲವು ಗೊಂದಲ, ಏರುಪೇರು, ಸಮಸ್ಯೆಗಳ ನಡುವೆ ಎಲ್ಲ ಕಾಲಕ್ಕೂ ಸಲ್ಲುವ ಆಧ್ಯಾತ್ಮಿಕ ಧ್ಯೇಯ-ಆದರ್ಶಗಳನ್ನು ಅವರು ಜನರ ಮುಂದಿಟ್ಟರು. ಸನಾತನ ಸತ್ಯಗಳನ್ನು ಸ್ವಾನುಭವದ ಕುಲುಮೆಯಲ್ಲಿ ಪ್ರಜ್ವಲಿಸಿ, ಅದನ್ನು ದಿವ್ಯಪ್ರಭೆಯ ಸ್ವರ್ಣಕಾಂತಿಯಿಂದ ಹೊಸದಾಗಿಸಿ, ಮಾನವನಿಗೆ ಸತ್ಪಥವನ್ನು ತೋರಿಸಿಕೊಟ್ಟರು. ಶ್ರೀರಾಮಕೃಷ್ಣರ ಪರಿಶುಭ್ರ ಜೀವನ, ಉಪದೇಶಗಳೊಂದಿಗೆ ಶ್ರೀಮಾತೆಯವರ ಮತ್ತು ಸ್ವಾಮಿ ವಿವೇಕಾನಂದರ ಬದುಕೂ ಹಳೆಯ-ಹೊಸ ಆಧ್ಯಾತ್ಮಿಕ ಆದರ್ಶಗಳನ್ನು ಮೇಳವಿಸಿ, ಒಂದು ವಿನೂತನ ಆಧ್ಯಾತ್ಮಿಕ ಸ್ರೋತವಾಗಿ ರೂಪಗೊಂಡಿತು. ಈ ರೀತಿ 'ದಿವ್ಯತ್ರಯರ' ಜೀವನ-ಸಂದೇಶಗಳು ನವಭಾರತದ ಉದಯಕಾಲದಲ್ಲಿ ಹೊಸ ಸ್ಫೂರ್ತಿಯ ವಾರಿಧಿಯಾಗಿ ಹೊರಹೊಮ್ಮಿದ್ದು ನಮ್ಮ ದೇಶದ, ಅಷ್ಟೇಕೆ – ಇಡೀ ಜಗತ್ತಿನ ಸೌಭಾಗ್ಯವೆನ್ನಬೇಕು! ಈ ದಿವ್ಯಪ್ರವಾಹದಲ್ಲಿ ಮಿಂದೇಳುತ್ತ, ದಿವ್ಯತ್ರಯರ ಸಂದೇಶವನ್ನು ಎಲ್ಲೆಡೆ ಸಾರುವ ಕೈಂಕರ್ಯವನ್ನು ವಹಿಸಿಕೊಂಡ ಅನೇಕ ಮಂದಿ ಮುಮುಕ್ಷುಗಳ ಒಂದು ಬಳಗವೇ ರೂಪುಗೊಂಡಿತು. ಇದರ ಮೂರ್ತರೂಪವೇ 'ಶ್ರೀರಾಮಕೃಷ್ಣ ಮಹಾಸಂಘ'. ದಿವ್ಯತ್ರಯರ ಜೀವನ-ಸಂದೇಶಗಳನ್ನು ಅನುಸರಿಸಿ ಬದುಕುವ, ಅದಕ್ಕೆ ಅನುಗುಣವಾಗಿ ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸುವ ವಿಧಾನವಾಗಿ ಮೂಡಿಬಂದ ಸೇವಾಕಾರ್ಯಗಳಲ್ಲಿ ಒಂದಾಗಿದೆ – ಸಾಹಿತ್ಯಸೇವೆ.

ಅನಾದಿ ಕಾಲದಿಂದ ಮುಂದುವರಿದುಕೊಂಡು ಬಂದಿದ್ದ ವೇದಾಂತ ತತ್ತ್ವಗಳ ಜೀವಂತ ಭಾಷ್ಯವೆಂಬಂತೆ ಶ್ರೀರಾಮಕೃಷ್ಣರು, ಶ್ರೀಮಾತೆಯವರು, ಸ್ವಾಮಿ ವಿವೇಕಾನಂದರು ಬಾಳಿ ಬದುಕಿದರು. ಅನೇಕ ವೇಳೆ, ಈ ರೀತಿಯ ದಿವ್ಯಜೀವನಗಳ ಉದಾಹರಣೆ ಕಣ್ಣೆದುರು ಇಲ್ಲದೆ ಹೋಗಿದ್ದರೆ, ವೇದಾಂತ ಹಾಗೂ ಸನಾತನ ಧರ್ಮವು ಸಾರುವ ಸತ್ಯಗಳಿಗೆ ದೃಢೀಕರಣವೇ ಇಲ್ಲವೇನೋ ಅನ್ನಿಸುತ್ತದೆ. ಹಿಂದೆ ಆಗಿಹೋದ ಅನೇಕ ಮಂದಿ ಅವತಾರ ಪುರುಷರ, ಸಾಧುಸಂತರ, ಹಾಗೂ ಆಚಾರ್ಯರುಗಳ ಪರಂಪರೆ ಕಾಲಕಾಲಕ್ಕೆ ಈ ಬಗೆಯ ದೃಢೀಕರಣವನ್ನು ಮಾಡುತ್ತ ಬಂದಿದೆ ; ಆದರೂ ಮಾನವನ ಸಂದೇಹಪ್ರವೃತ್ತಿಗೆ ಕೊನೆಯಿಲ್ಲ — ಭಗವಂತ ಮತ್ತೆ ಆವಿರ್ಭವಿಸಿ ಬಂದು ಅದೇ ಕಾರ್ಯವನ್ನು ಮತ್ತೆ ಮಾಡಬೇಕಾಯಿತು. ಈ ಹಿನ್ನೆಲೆಯೊಂದಿಗೆ ವೇದಾಂತವು ದಿವ್ಯತ್ರಯರ ಜೀವನದೊಂದಿಗೆ ಹೊಸ ಹೊಳಹನ್ನು ಕಂಡಿತು ಎನ್ನಬೇಕು. ಶ್ರೀರಾಮಕೃಷ್ಣ ಮಹಾಸಂಘದಲ್ಲಿ ದಿವ್ಯತ್ರಯರ ಜೀವನ, ಸಂದೇಶಗಳೊಂದಿಗೆ ವೇದಾಂತ ಸಾಹಿತ್ಯವನ್ನೂ ಪ್ರಚಾರ ಮಾಡುವುದು ಈ ಕಾರಣಕ್ಕಾಗಿ.

### ಸ್ವಾಮಿ ವಿವೇಕಾನಂದರು – ಸಂದೇಶ ವಾಹಕರು

ಶ್ರೀರಾಮಕೃಷ್ಣರು ಬೋಧಿಸಿದ ಆಧ್ಯಾತ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದವರು ಸ್ವಾಮಿ ವಿವೇಕಾನಂದರು. ಅಸಾಧಾರಣ ಗುರುವಿನ ವಿಶ್ವವ್ಯಾಪಕ ಸಂದೇಶಗಳಿಗೆ ಯಾವುದೇ ಕುಂದು ಬಾರ

ದಂತೆ, ಅವುಗಳಿಗೆ ತಮ್ಮ ಬದುಕು, ಭಾಷಣ, ಬರಹಗಳ ಮೂಲಕ ಭಾಷ್ಯ ಬರೆದ ಶ್ರೇಯಸ್ಸು ಸ್ವಾಮೀಜಿಯವರದು. ಗ್ರಂಥ ಪ್ರಕಾಶನ, ಪತ್ರಿಕೆಗಳ ಮೂಲಕ ಶ್ರೀಗುರುದೇವನ ಜೀವನ-ಸಂದೇಶಗಳು ಜನಸಾಮಾನ್ಯರಿಗೆ ಸುಲಭವಾಗಿ ಲಭ್ಯವಾಗಬೇಕೆಂಬುದೇ ಅವರ ಉದ್ದೇಶವಾಗಿತ್ತು. ಶ್ರೀರಾಮಕೃಷ್ಣರ ಜೀವನ, ಸಂದೇಶಗಳನ್ನು ಗ್ರಂಥರೂಪದಲ್ಲಿ ನೀಡಿದ ಮಹೇಂದ್ರನಾಥ ಗುಪ್ತ, ಅಕ್ಷಯಕುಮಾರ ಸೇನ್ ಮುಂತಾದವರನ್ನು ಸ್ವಾಮೀಜಿ ತುಂಬು ಹೃದಯದಿಂದ ಶ್ಲಾಘಿಸಿದರು. ಸ್ವತಃ ಸ್ವಾಮೀಜಿಯವರೇ ತಮ್ಮ ಪ್ರವಚನಮಾಲೆಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿದರು. ಅದರೊಂದಿಗೆ ಇಂಗ್ಲೀಷ್ ಹಾಗೂ ಬಂಗಾಳಿಯಲ್ಲಿ ಪತ್ರಿಕೆಗಳನ್ನು ಹೊರಡಿಸಿ, ಇತರ ಭಾಷೆಗಳಲ್ಲೂ ಈ ಕಾರ್ಯ ನಡೆಯಬೇಕು ಎಂದು ಕರೆ ಕೊಟ್ಟರು. ಸಾಹಿತ್ಯ ಪ್ರಚಾರದ ಮೂಲಕವೂ ಜನರಲ್ಲಿ ಆಧ್ಯಾತ್ಮಿಕ ಜಾಗೃತಿಯುಂಟಾಗಬೇಕು ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಅನ್ನದಾನ, ವಿದ್ಯಾದಾನ, ಅಧ್ಯಾತ್ಮ ಜ್ಞಾನ ಈ ಮೂರು ಬಗೆಯ ದಾನಗಳಲ್ಲಿ ಕೊನೆಯದೇ ಅತ್ಯಂತ ಶ್ರೇಷ್ಠವಾದುದು; ಅದನ್ನು ಕಾರ್ಯಗತಗೊಳಿಸುವ ಮಾಧ್ಯಮವೇ ಗ್ರಂಥ-ಪತ್ರಿಕೆಗಳ ಪ್ರಕಾಶನ ಹಾಗೂ ಪ್ರಚಾರ ಎಂದು ಸ್ವಾಮೀಜಿ ನಂಬಿದ್ದರು.

ಬಂಗಾಳಿ ಭಾಷೆಯಲ್ಲಿ ಆರಂಭಗೊಂಡ 'ಉದ್ಬೋಧನ' ಮಾಸಪತ್ರಿಕೆಗೆ ಸ್ವಾಮೀಜಿಯವರ ಸಹೋದರ ಶಿಷ್ಯರಾದ ತ್ರಿಗುಣಾತೀತಾನಂದರು ಮೊದಲ ಸಂಪಾದಕರಾದರು. ಅದೇ ರೀತಿ ಇಂಗ್ಲಿಷಿನ 'ಪ್ರಬುದ್ಧಭಾರತ', 'ವೇದಾಂತ ಕೇಸರಿ' ಪತ್ರಿಕೆಗಳಲ್ಲೂ ಅನೇಕ ಮಂದಿ ಭಕ್ತರು ಹಾಗೂ ಸಂನ್ಯಾಸಿಗಳು ಅವಿರತವಾಗಿ ದುಡಿದರು. ಕ್ರಮೇಣ ಇತರ ದೇಶೀಯ ಭಾಷೆಗಳಲ್ಲೂ ಹಲವಾರು ಪತ್ರಿಕೆಗಳು ಆರಂಭಗೊಂಡವು. ಇದರ ಬಳಿಕ ಪುಸ್ತಕ ಪ್ರಕಾಶನ ಹಾಗೂ ಪತ್ರಿಕೆಗಳು ಜೊತೆಜೊತೆಯಾಗಿ ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ನಿರತವಾಗುತ್ತ, ದಿವ್ಯತ್ರಯರ ಸಂದೇಶಗಳು ಜನರನ್ನು ತಲುಪುವುದಕ್ಕೆ ಒಂದು ಪ್ರಧಾನ ಮಾಧ್ಯಮವಾದುದನ್ನು ನಾವು ಕಾಣುತ್ತೇವೆ.

### ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಾಹಿತ್ಯ

೧೯೦೪ರಲ್ಲಿ ಆರಂಭವಾದ ಬೆಂಗಳೂರು ರಾಮಕೃಷ್ಣ ಮಠ, ೧೯೨೫ರಲ್ಲಿ ಆರಂಭವಾದ ಮೈಸೂರು ರಾಮಕೃಷ್ಣ ಆಶ್ರಮ ಇವು ದಿವ್ಯತ್ರಯರನ್ನು ಕುರಿತ ಗ್ರಂಥಗಳನ್ನು ಪ್ರಕಟ ಮಾಡಲು ಆರಂಭಿಸಿದವು. ಕಳೆದ ಶತಮಾನದಲ್ಲಿ ಆರಂಭಗೊಂಡ ಈ ಕಾರ್ಯ, ಕ್ರಮೇಣ ವ್ಯಾಪಕಗೊಳ್ಳುತ್ತ, ಮೈಸೂರು ಆಶ್ರಮವು ಪ್ರಧಾನ ಪ್ರಕಾಶನ ಸಂಸ್ಥೆಯಾಗಿ ರೂಪುಗೊಂಡಿತು. ಆದರೆ ಕನ್ನಡದಲ್ಲಿ ಪತ್ರಿಕೆ ಆರಂಭವಾಗಲು ಇನ್ನಷ್ಟು ವರ್ಷ ಕಾಯಬೇಕಾಯಿತು. ಕ್ರಿ.ಶ. ೨೦೦೦ ಜನವರಿಯಲ್ಲಿ 'ವಿವೇಕಪ್ರಭ' ಆರಂಭವಾಗುವ ತನಕ.

ಕನ್ನಡಲ್ಲಿ ದಿವ್ಯತ್ರಯರ ಜೀವನ, ಉಪದೇಶಗಳನ್ನು ಒಳಗೊಂಡ ಪ್ರಮುಖ ಗ್ರಂಥಗಳೆಲ್ಲವೂ ಪ್ರಕಟವಾಗಿವೆ; ಇದರೊಂದಿಗೆ ಇತರ ಅನೇಕ ಶಾಸ್ತ್ರಗ್ರಂಥಗಳೂ, ಆಧ್ಯಾತ್ಮಿಕ-ಸಾಂಸ್ಕೃತಿಕ ವಿಚಾರಗಳನ್ನೊಳಗೊಂಡ ಕೃತಿಗಳೂ, ವ್ಯಕ್ತಿತ್ವ ವಿಕಸನ ಹಾಗೂ ಶೈಕ್ಷಣಿಕ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳೂ ಪ್ರಕಟವಾಗುತ್ತಿವೆ. ಈ ಕಾರ್ಯದಲ್ಲಿ ಪ್ರಮುಖವಾಗಿ ಸೇವೆ ಸಲ್ಲಿಸಿದ ಹಲವು ಮಂದಿ ಗಣ್ಯರು ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯವನ್ನು ಶಿಖರದೆತ್ತರಕ್ಕೆ ಕೊಂಡೊಯ್ದಿದ್ದಾರೆ. ಇನ್ನೂ ಈ ಕಾರ್ಯ ಮುಂದುವರಿಯುತ್ತಿದೆ.

ಮೈಸೂರು-ಬೆಂಗಳೂರು ಆಶ್ರಮಗಳಲ್ಲಿ ಗ್ರಂಥ ಪ್ರಕಾಶನ ಆರಂಭಗೊಂಡ ಸಮಯದಲ್ಲಿ ಕನ್ನಡದ ಶ್ರೇಷ್ಠ ವಿದ್ವಾಂಸರದ ಎ.ಆರ್.ಕೃಷ್ಣಶಾಸ್ತ್ರಿ, ತ.ಸು.ವೆಂಕಣ್ಣಯ್ಯ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮುಂತಾದವರು ಕೃತಿರಚನೆ ಮಾಡಿದ್ದರು. ಮುಂದೆ ರಾಷ್ಟ್ರಕವಿ ಕುವೆಂಪು ಅವರು ಮೈಸೂರು ಆಶ್ರಮದ ಸಂಪರ್ಕಕ್ಕೆ ಬಂದ ಮೇಲೆ ಕೃತಿರಚನೆ, ಅನುವಾದ, ಸಂಪಾದನೆ ಮುಂತಾದ ಹಲವು ಸಾಹಿತ್ಯಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು; ಪ್ರಸಿದ್ಧ ಸಾಹಿತಿಗಳಾದ ನಂತರವೂ ಅವರು ಆಶ್ರಮದ ಸಾಹಿತ್ಯಸೇವೆಯಲ್ಲಿ ಸಕ್ರಿಯರಾಗಿ ಮುಂದುವರಿದರು. 'ಶ್ರೀರಾಮಕೃಷ್ಣ ವಚನವೇದ' ಕೃತಿಯ ಹಾಡುಗಳನ್ನು ಅತ್ಯುತ್ಕೃಷ್ಟವಾಗಿ ಅನುವಾದಿಸಿ ಕೊಟ್ಟ ಡಾ. ಜಿ.ಎಸ್.ಶಿವರುದ್ರಪ್ಪ, ಹಲವು ಕೃತಿಗಳಲ್ಲಿ ದಿವ್ಯತ್ರಯರ ವಿಚಾರಗಳನ್ನು ಹೊರಹೊಮ್ಮಿಸಿದ ಡಾ.ದೇ.ಜವರೇಗೌಡ, ಡಾ. ಸಿ.ಪಿ.ಕೆ, ಡಾ. ಪ್ರಭುಶಂಕರ ಅವರು ಆಶ್ರಮದ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ಸಲ್ಲಿಸಿದ ಪಾತ್ರ ಅಪಾರವಾದುದು.

### ಪ್ರಕಟಣೆಯ ಹೊಸ ಬಗೆಗಳು

ಇತ್ತೀಚೆಗೆ ಮುದ್ರಣ, ಪ್ರಕಾಶನ ಕ್ಷೇತ್ರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳು ಅಸಾಧಾರಣ ಪ್ರಭಾವ ಬೀರಿವೆ. ಮುದ್ರಣಯಂತ್ರ, ಕಂಪ್ಯೂಟರ್ ಮೂಲಕ ಅಕ್ಷರ ಜೋಡಣೆ, ನಾನಾ ವರ್ಣಗಳಲ್ಲಿ ಪುಟಗಳ ವಿನ್ಯಾಸ ಇತ್ಯಾದಿ ಆವಿಷ್ಕಾರಗಳು ಪ್ರಕಾಶನದ ಕಾರ್ಯಗಳನ್ನು ಸುಲಭಗೊಳಿಸಿವೆ. ಆದರೆ ಭಾಷಾಶುದ್ಧಿ, ವಿಷಯ ನಿರೂಪಣೆ, ಶೈಲಿ, ಮಾಹಿತಿಗಳ ನಿಖರತೆ ಮುಂತಾದ ವಿಷಯಗಳಲ್ಲಿ? - ಹಿಂದಿನ ಕಾಲದಲ್ಲಿದ್ದ ಅಚ್ಚುಕಟ್ಟುತನ ಮರೆಯಾದಂತೆ ಅನ್ನಿಸುತ್ತದೆ. ಸಮೂಹ ಮಾಧ್ಯಮ, ಸಾಮಾಜಿಕ ಜಾಲತಾಣಗಳು, ಮೊಬೈಲ್-ಕಂಪ್ಯೂಟರ್‌ಗಳ ಪ್ರಭಾವದಿಂದ ಓದುವ ಪ್ರವೃತ್ತಿಯೇ ಕಡಿಮೆಯಾಗಿದೆ ಎನ್ನಲಾಗುತ್ತಿದೆ. ಆದರೆ ಪುಸ್ತಕ ಮಾರಾಟ ದಿನೇ ದಿನೇ ಹೆಚ್ಚುತ್ತಿರುವುದಂತೂ ನಿಜ. ಈ ಎಲ್ಲ ಬದಲಾವಣೆಗಳ ನಡುವೆ ದಿವ್ಯತ್ರಯರ ಜೀವನ-ಸಂದೇಶಗಳನ್ನು ಜನರೆಡೆಗೆ ತಲುಪಿಸುವ ಕಾರ್ಯ ನಿಜಕ್ಕೂ ಸವಾಲಾಗಿದೆ.

'ವಿವೇಕಪ್ರಭ' ಪತ್ರಿಕೆಯು ೨೫ನೇ ವರ್ಷಕ್ಕೆ ಕಾಲಿಡುತ್ತಿದೆ. ೨೦೦೦ನೇ ಇಸವಿಯ ಜನವರಿ ತಿಂಗಳಲ್ಲಿ ಆರಂಭಗೊಂಡ ಈ ಮಾಸಪತ್ರಿಕೆಯು ಹಲವು ಮಂದಿ ಹಿರಿಯ ಸಂನ್ಯಾಸಿಗಳ ದಕ್ಷ ನೇತೃತ್ವದಲ್ಲಿ ದೃಢ ಹೆಜ್ಜೆಗಳೊಂದಿಗೆ ಮುನ್ನಡೆಯಿತು; ಹಲವು ದಿಕ್ಕುಗಳಲ್ಲಿ ಅದು ತನ್ನ ಛಾಪನ್ನು ಬಿತ್ತಿದೆ. ವಿಷಯ ವೈವಿಧ್ಯ, ಬೌದ್ಧಿಕ ಚಿಂತನೆ, ಆಧ್ಯಾತ್ಮಿಕ ವಿಚಾರಧಾರೆ, ಶೈಕ್ಷಣಿಕ ಹಾಗೂ ನೈತಿಕ ಮೌಲ್ಯಗಳು, ಮನರಂಜನೆ - ಈ ಎಲ್ಲ ಕ್ಷೇತ್ರಗಳಲ್ಲಿ ಹಲವು ಉತ್ತಮ ಲೇಖನಗಳು ಹಾಗೂ ಧಾರಾವಾಹಿಗಳು ಇಲ್ಲಿಯವರೆಗೆ ಪ್ರಕಟವಾಗಿವೆ. ಜೀವನದ ಎಲ್ಲ ಸ್ತರದಲ್ಲಿಯೂ ಈ ವಿಚಾರಗಳು ಸ್ವೀಕೃತವಾಗಬೇಕು ಎಂಬುದೇ ನಮ್ಮ ಆಶಯ.

### ೨೫ನೇ ವರ್ಷದ ಸಂಭ್ರಮ

'ರಜತ ಮಹೋತ್ಸವ'ವೆಂಬದು ಒಂದು ಮೈಲಿಗಲ್ಲು ಎಂದು ಭಾವಿಸುವುದಾದರೆ, ಇಲ್ಲಿಯ ತನಕ ನಾವು ನಡೆದು ಬಂದ ದಾರಿಯನ್ನು ಗಮನಿಸುವುದರಲ್ಲಿ ಒಂದು ಅರ್ಥವಿದೆ. ಪ್ರಾಪಂಚಿಕ ಜೀವನದ ಪ್ರವಾಹದ ನಡುವೆ ಆಧ್ಯಾತ್ಮಿಕತೆಯೆಂಬುದು ಮುಳುಗಿಹೋಗದಂತೆ, ಪ್ರಾಚೀನ-ಆಧುನಿಕ ಭಾವನೆಗಳೆರಡನ್ನೂ ಸಮೀಕರಿಸುತ್ತ, ಪಾರಲೌಕಿಕ ಸತ್ಯಗಳೊಂದಿಗೆ ದೈನಂದಿನ ಬದುಕಿನ ಕ್ಷಣಗಳನ್ನು ಜೋಡಿಸುತ್ತ, ಅತ್ಯಂತ ಶ್ರೇಷ್ಠ ಆದರ್ಶಗಳನ್ನು ಚುಕ್ಕಾಣಿಯಾಗಿಸಿಕೊಂಡು ನದಿ ದಾಟುವ ಕಾರ್ಯದಂತಿದೆ ನಮ್ಮ ಪತ್ರಿಕೆಯ ಕಾರ್ಯ. ಇದರಲ್ಲಿ ಸಫಲತೆ-ವಿಫಲತೆಗಳ ಮೌಲ್ಯಮಾಪನ ಮಾಡುವ ಬದಲು, ಉನ್ನತ ಧ್ಯೇಯ-ಆದರ್ಶಗಳ ಪ್ರತಿಪಾದನೆಯಲ್ಲಿ ನಾವು ಎಷ್ಟರಮಟ್ಟಿಗೆ ತೊಡಗಿಕೊಂಡಿದ್ದೇವೆ ಎಂಬುದೇ ಮುಖ್ಯವಾಗುತ್ತದೆ. ಶ್ರೀಮಾತೆಯವರು ಒಂದು ಸಲ ತಮ್ಮ ಶಿಷ್ಯನಿಗೆ ಹೇಳುತ್ತಾರೆ: ''ಮಗೂ, ನನಗೋಸ್ಕರ ಯಾರು ಒಂದಿಷ್ಟನ್ನಾದರೂ ಮಾಡಿರುತ್ತಾನೋ, ಅವನನ್ನು ನಾನೆಂದಿಗೂ ಮರೆಯಲಾರೆ.'' ಇದು ಜಗನ್ಮಾತೆ ನೀಡುವ ಭರವಸೆ. ಭಗವಂತನ ಕಾರ್ಯದಲ್ಲಿ ತೊಡಗಿಕೊಂಡವನ ಯಾವ ಶ್ರಮವೂ ವ್ಯರ್ಥವಾಗದು. ಈ ಭಾವವೇ ಪತ್ರಿಕೆಯ ಮುನ್ನಡೆಗೆ ಪ್ರೇರಕ ಶಕ್ತಿಯಾಗಲಿ ಎಂಬುದೇ ನಮ್ಮ ಆಶಯ.

### ಮುನ್ನೋಟ

ತಿಂಗಳ ನಂತರ ತಿಂಗಳು, ವರ್ಷಗಳ ನಂತರ ವರ್ಷಗಳು ಉರುಳುತ್ತ ಹೋದಂತೆ ಮತ್ತೆ ಹೊಸ ಹೆಜ್ಜೆ ಹಾಕುತ್ತ ಮುನ್ನಡೆಯುವುದು ನಿಸರ್ಗದಲ್ಲಿ ತೀರ ಸಹಜವಾದ ಕ್ರಿಯೆ. ಋತುಮಾನಗಳು ಬದಲಾದಂತೆ, ಪ್ರಪಂಚ ಏರುಪೇರುಗಳನ್ನು ಕಂಡಂತೆ ನಮ್ಮ ಜೀವನವೂ ಬದಲಾಗುತ್ತದೆ, ಹೊಸತನ್ನು ಅನುಭವಿಸುತ್ತ ಮುಂದೆ ಸಾಗುತ್ತದೆ. ಈ ಗತಿಗೆ ಹೊರತಲ್ಲ ಪತ್ರಿಕೆಯ ಚಲನೆ ಕೂಡ. ಆದರೆ ಹೇಗೆ ನಿಸರ್ಗದಲ್ಲಿ ಯಾವುದೂ ಒಬ್ಬಂಟಿಯಲ್ಲವೋ, ಅದೇ ರೀತಿ ಪತ್ರಿಕೆ ಕೂಡ ಹತ್ತುಹಲವು ಮಂದಿ ಸೇರಿ ಮುನ್ನಡೆಸುವ ಒಂದು ವಿದ್ಯಮಾನವಾಗಿದೆ. ಇದನ್ನು ನಾವು ಮರೆಯುವಂತಿಲ್ಲ.

ಪ್ರತಿ ತಿಂಗಳೂ ಪತ್ರಿಕೆಯನ್ನು ಹೊರಡಿಸಲು ಅನೇಕ ಮಂದಿ ನೀಡುವ ಸಹಕಾರ ಅತ್ಯಂತ ಮುಖ್ಯವಾಗುತ್ತದೆ. ಅವರ ಸೇವೆಯನ್ನು ಸ್ಮರಿಸುತ್ತ, ಅವರಿಗೆಲ್ಲ ನಮ್ಮ ಕೃತಜ್ಞತೆಯನ್ನು ಧನ್ಯತಾಭಾವದೊಂದಿಗೆ ಸಲ್ಲಿಸುತ್ತಿದ್ದೇವೆ. ಅವರಲ್ಲಿ ಹೆಸರಿಸಬೇಕಾದ ಪ್ರಮುಖರು ಇವರು:

೧) **ಲೇಖಕರು** (ಸಂನ್ಯಾಸಿಗಳು, ಭಕ್ತರು, ಸಾಹಿತಿಗಳು, ಅನುವಾದಕರು)

೨) **ಸ್ವಯಂಸೇವಕರು** (ಆಶ್ರಮದ ಭಕ್ತರು ಹಾಗೂ ಹಿತೈಷಿಗಳು)

೩) **ಪತ್ರಿಕೆಯ ಸಿಬ್ಬಂದಿ ವರ್ಗದವರು**

೪) **ಮುದ್ರಕರು ಹಾಗೂ ಜಾಹೀರಾತುದಾರರು**

೫) **ಅಂಚೆಕಛೇರಿ ಹಾಗೂ ಇತರ ಸರ್ಕಾರಿ ಕಛೇರಿಗಳು**

ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯದ ರಚನೆ, ಪ್ರಕಾಶನ ಹಾಗೂ ಪ್ರಚಾರ ಕಾರ್ಯವು ಕೇವಲ ಆಶ್ರಮಗಳಿಗೆ ಹಾಗೂ ಸಂನ್ಯಾಸಿಗಳಿಗೆ ಸೀಮಿತವಾಗಿಲ್ಲ. ಭಾರತದ ಆಧ್ಯಾತ್ಮಿಕ ಭಾವನೆಗಳನ್ನು ದಿವ್ಯತ್ರಯರ ಜೀವನ, ಉಪದೇಶಗಳ ಮೂಲಕ ಕಾಣುವ ಮತ್ತು ವಿವರಿಸುವ ಪ್ರಯತ್ನ ಅತ್ಯಂತ ವ್ಯಾಪಕವಾಗಿ ನಡೆದಿದೆ. ಹತ್ತಾರು ಸಂಘಸಂಸ್ಥೆಗಳು, ಗ್ರಂಥಗಳು ಲೇಖಕರು ಹಾಗೂ ಪತ್ರಿಕೆಗಳು ತಮ್ಮದೇ ರೀತಿ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ರಾಮಕೃಷ್ಣ ಮಹಾಸಂಘವು ನಡೆಸುವ ಪ್ರಕಾಶನ ಹಾಗೂ ಪತ್ರಿಕೆಗಳು ಈ ಪ್ರಚಾರ ಕಾರ್ಯವನ್ನು ಒಂದು ಸೇವಾಯಜ್ಞವೆಂದೇ ಭಾವಿಸಿ ಮುನ್ನಡೆಯುತ್ತಿದೆ. ಇದರಲ್ಲಿ ನಮ್ಮೊಂದಿಗೆ ಕೈಜೋಡಿಸಿ ನೆರವು ನೀಡಲು ಎಲ್ಲರಿಗೂ ಅವಕಾಶವಿದೆ, ಎಲ್ಲರಿಗೂ ಆಹ್ವಾನವಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಇದೆಲ್ಲವನ್ನೂ ಸ್ವೀಕರಿಸಿ, ನಮ್ಮ ತಪ್ಪು-ಒಪ್ಪುಗಳನ್ನು ಗಮನಿಸುತ್ತ ನೆರವಾಗುವ ಓದುಗರು ನಮ್ಮೆಲ್ಲ ಚಟುವಟಿಕೆಗಳ ಗಮ್ಯಸ್ಥಾನ. ದಿವ್ಯತ್ರಯರ ಹಾಗೂ ಆಧ್ಯಾತ್ಮಿಕ ಭಾವಗಳು ಸೂಕ್ತ ರೀತಿಯಲ್ಲಿ ಅವರನ್ನು ತಲುಪುವಂತಾದರೆ ನಮ್ಮ ಶ್ರಮ ಸಾರ್ಥಕವೆಂದೇ ಹೇಳಬೇಕಾಗುವುದು. ೨೫ನೇ ವರ್ಷಕ್ಕೆ ಕಾಲಿಡುವ ಈ ವಿಶೇಷ ಸಂದರ್ಭದಲ್ಲಿ ಎಲ್ಲರಿಗೂ ನಮ್ಮ ಶುಭಾಶಯಗಳನ್ನು ಸಲ್ಲಿಸುತ್ತಿದ್ದೇವೆ. ✷

### ಜನವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಸೋಮವಾರ | ಕಲ್ಪತರು ದಿನಾಚರಣೆ |
| ೩ | ಬುಧವಾರ | ಶ್ರೀಶಾರದಾದೇವಿ ಜಯಂತಿ |
| ೭ | ಭಾನುವಾರ | ಏಕಾದಶಿ |
| | | ಸ್ವಾಮಿ ಶಿವಾನಂದ ಜಯಂತಿ |
| ೧೨ | ಶುಕ್ರವಾರ | ರಾಷ್ಟ್ರೀಯ ಯುವ ದಿನಾಚರಣೆ |
| ೧೬ | ಮಂಗಳವಾರ | ಸ್ವಾಮಿ ಶಾರದಾನಂದ ಜಯಂತಿ |
| ೨೦ | ಶನಿವಾರ | ಏಕಾದಶಿ |
| ೨೪ | ಬುಧವಾರ | ಸ್ವಾಮಿ ತುರೀಯಾನಂದ ಜಯಂತಿ |